O.S. ನಂಬರಃ 34/2020

ಪಿ. ಡಬ್ಲ್ಯೂಃ 1

ದಿಃ 07-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಎ.ಎನ್.ಟಿ. ವಕೀಲರಿಂದಃ</u>

ನಾನು ಕೆಇಬಿ ಯಲ್ಲಿ ಸೇವೆ ಸಲ್ಲಿಸಿದ್ದೇನೆ. ಬೊಬ್ರಿ, ಗಣಪತಿ ಹಾಗೂ ನಮ್ಮ ತಂದೆಯಾದ ದಿನ್ನಾ ಸಹೋದರರು ಎಂದರೆ ಸರಿ. ದಾವಾ ಅನುಸೂಚಿ 'ಅ' ಆಸ್ತಿಗಳು ನಮ್ಮ ತಂದೆ ಹಾಗೂ ಆತನ ಸಹೋದರರಿಗೆ ವಾರಸಾ ನಾತೆಯಿಂದ ಪ್ರಾಪ್ತವಾಗಿರುತ್ತವೆ. ಅನುಸೂಚಿ 'ಅ' ಆಸ್ತಿಗಳಲ್ಲಿ ಕೆಲವೊಂದು ಗೇಣಿ ಮತ್ತು ಇನ್ನುಳಿದವು ಮಾಲ್ಕಿ ಜಮೀನುಗಳಾಗಿದ್ದವು. ಗೇಣಿ ಜಮೀನುಗಳಾವುವು ಮತ್ತು ಮಾಲ್ಕಿ ಜಮೀನುಗಳಾವುವು ಎಂದು ಹೇಳಲು ಬರುವುದಿಲ್ಲ. ಅನುಸೂಚಿ 'ಅ' ಜಮೀನುಗಳನ್ನು ನನ್ನ ತಂದೆ ಮತ್ತು ಆತನ ಸಹೋದರರು ಒಟ್ಟಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿ.

ಅನುಸೂಚಿ 'ಅ' ಆಸ್ತಿಗಳಲ್ಲಿ ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಇನ್ನುವರೆಗೂ ಪಾಲು ಆಗಿಲ್ಲ ಹಾಗೂ ಕಬ್ಜಾ ಮತ್ತು ಸಾಗುವಳಿ ಏಕತ್ರದಲ್ಲಿದೆ ಎಂದರೆ ಸರಿ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ಪಹಣಿ ಪತ್ರಿಕೆಗಳಲ್ಲಿ ಮೃತರ ವಾರಸುದಾರರ ಹೆಸರು ನಮೂದಾಗಿದೆ ಎಂದರೆ ಸರಿ. ದಾವಾ ಸರ್ವೇ ನಂಬರ 298/1 ಅ ರಲ್ಲಿ ನನಗೆ ಸಂಬಂಧಿಸಿದ ಮನೆ ಇದೆ ಎಂದರೆ ಸರಿ. ಸದರಿ

ಜಮೀನಿನಲ್ಲಿ 1,6,12,22 ನೇ ಪ್ರತಿವಾದಿಯವರ ಮನೆಯೂ ಸಹ ಇದೆ. 12 ನೇ ಪ್ರತಿವಾದಿ ವಾಸವಿದ್ದ ಮನೆ ಆತನ ಸ್ವಂತ ಮನೆಯಿದ್ದು, ಅದಕ್ಕೆ ಹಣ ಅವರೇ ಹೂಡಿದ್ದಾರೆಂದರೆ ಸರಿ. 12 ನೇ ಪ್ರತಿವಾದಿ ಮನೆ ಮೊದಲು ಹುಲ್ಲಿನ ಮನೆಯಿದ್ದು, ನಂತರ ಹಂಚಿನ ಮನೆಯನ್ನಾಗಿ ಮಾಡಿಸಿಕೊಂಡಿದ್ದಾರೆ. ನಾನು ವಾಸವಿದ್ದ ಮನೆಯೂ ಸಹ ಸ್ಲ್ಯಾಬು ಮನೆಯಾಗಿರುತ್ತದೆ. 1,6,22 ನೇ ಪ್ರತಿವಾದಿಯವರ ಮನೆಗಳೂ ಸಹ ಹಂಚಿನ ಮನೆಗಳಿರುತ್ತವೆ.

12 ನೇ ಪ್ರತಿವಾದಿ ಕಟ್ಟಿಸಿದ ಮನೆಯಲ್ಲಿ ಪಾಲು ಕೇಳುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಮೂಹಿಕ ಆಸ್ತಿಯಲ್ಲಿದೆ ಎಂದು ಹೇಳುತ್ತಾರೆ. ನಮ್ಮ ಮನೆಯ ಪೂರ್ವಕ್ಕಿರುವ ಆಪಸ್ ನಾತೆಯಿಂದ ಬಿಟ್ಟಿರುವ ದಾರಿ ಜಾಗೆ ಬೊಬ್ರುವಾಡಾದಿಂದ ಬಂದಿರುವ ಸಾರ್ವಜನಿಕ ರಸ್ತೆಗೆ ಹೊಂದಿಕೊಂಡಿದೆ. ಸರ್ವೇ ನಂ. 298/1 ಅ ಪೂರ್ವಕ್ಕೆ ಬಾಲಕೃಷ್ಣ ನಾಯಕ ರವರ ಜಮೀನು ಇದೆ ಎಂದರೆ ಸರಿ.

(ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.